**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 107/2016**

ಸಿಡಬ್ಲ್ಯು 17 ಪಿಡಬ್ಲ್ಯು- 10

ದಿನಾಂಕಃ 06.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

| | | |
|---|---|---|
| ಪೂರ್ಣ ಹೆಸರು | : | ಪಿ ಆರ್ ಗುಡೋಡಗಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಪೋಲಿಸ ಪೇದೆ |
| ವಾಸ ಸ್ಥಳ | : | ಚಿಕ್ಕೋಡಿ ಪಿ ಎಸ್ |

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನಾು 2010 ರಿಂದ 2017 ರವರೆಗೆ ಚಿಕ್ಕೋಡಿ ಪೋಲಿಸ ಠಾಣೆಯಲ್ಲಿ ಪೇದೆ ಎಂದು ಸೇವೆ ಸಲ್ಲಿಸಿದ್ದೇನೆ. 11.01.2015 ರಂದು ಚಾಸಾ 18 ರವರು ಮೃತನ ಮರಣೋತ್ತರ ಪರೀಕ್ಷೆ ಮಾಡಿಸಲು ಶವವನ್ನು ನನಗೆ ಒಪ್ಪಿಸಿದ್ದು ಆಗ ನಾನು ಬೆಳಗಾವಿಯ ಬೀಮ್ಸ ಆಸ್ಪತ್ರೆಯಲ್ಲಿ ಪಿ ಎಮ್ ಪರೀಕ್ಷೆ ಮಾಡಿಸಿ ಶವವನ್ನು ಸಂಬಂಧಿಕರಿಗೆ ಕೊಟ್ಟು ಅವರಿಂದ ಪಾವತಿ ಪಡೆದು ಅದನ್ನು ನನ್ನ ವರದಿಯೊಂದಿಗೆ ಚಾಸಾ 18 ರಿಗೆ ಒಪ್ಪಿಸಿದೆ. ಸಾಕ್ಷಿ ತನ್ನ ವರದಿಯನ್ನು ನೋಡಿ ಗುರುತಿಸಿದ್ದು ಇದನ್ನು ನಿಪಿ 7 ಎಂದು, ಸಾಕ್ಷಿ ಸಹಿ ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಾವತಿ ನೋಡಿ ಗುರುತಿಸಿದ್ದು ಇದನ್ನು ನಿಪಿ 8 ಎಂದು, ಸಾಕ್ಷಿ ಸಹಿ ನಿಪಿ 8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ-** ಆರೋಪಿ ಪರ ಶ್ರೀ ಎಲ್ ಬಿ ಪಿ ವಕೀಲರಿಂದಃ

ಮದ್ಯಾಹ್ನ 12.30 ಗಂಟೆಗೆ ಶವ ಒಪ್ಪಿಸಿದ್ದರು. ನನಗೆ ಆ ಕರ್ತವ್ಯಕ್ಕೆ ಒಪ್ಪಿಸಿದ ಬಗ್ಗೆ ಎಸ ಹೆಚ್ ಡಿ ಯಲ್ಲಿ ನಮೂದು ಇದೆ. ನಾನು ಪಿ ಎಮ್ ಮಾಡಿಸಿಲ್ಲ ಅನ್ನುವದು ಮತ್ತು ಸುಳ್ಳು ವರದಿ ನೀಡಿದ್ದೇನೆ ಅನ್ನುವುದು ಸರಿಯಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.